ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ:ಸಿ7(2)ಪ್ರಾ.ಶಿ.ಅ./ಶಾ.ಮ.ಲೈ.ಕಿ.40/2014–15

ದಿನಾಂಕ:23.07.2014

**ಸುತ್ತೋಲೆ**

ವಿಷಯ: ರಾಜ್ಯದ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ.

*********

ರಾಜ್ಯದ ಸರ್ಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಹಾಗೂ ಮಹಿಳಾ ಸಿಬ್ಬಂದಿಗಳ ಮೇಲೆ ಲೈಂಗಿಕ ಕಿರುಕುಳ/ ಅತ್ಯಾಚಾರ ಹಾಗೂ ದೈಹಿಕ ಹಿಂಸೆ ಸೇರಿದಂತೆ ಹಲವಾರು ಪ್ರಕರಣಗಳು ಗಣನೀಯವಾಗಿ ನಡೆಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ವಿಷಯವು ಅತ್ಯಂತ ಗಂಭೀರವಾಗಿದ್ದು, ಸರ್ಕಾರ ಮತ್ತು ಸಮಾಜಕ್ಕೆ ತಲೆತಗ್ಗಿಸುವ ಸ್ಥಿತಿಯಾಗಿರುತ್ತದೆ, ಇದನ್ನು ತಡೆಗಟ್ಟುವುದು ಸರ್ಕಾರದ/ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಮಹಿಳೆಯರ, ಮಕ್ಕಳ ಹಾಗೂ ಶಾಲಾ ವಿದ್ಯಾರ್ಥಿನಿಯರ ಮೇಲೆ ಪದೇ ಪದೇ ಲೈಂಗಿಕ ದೌರ್ಜನ್ಯಗಳು, ಕಿರುಕುಳ, ಅತ್ಯಾಚಾರಗಳು ರಾಜ್ಯದ ವಿವಿಧೆಡೆಗಳಲ್ಲಿ ನಡೆಯುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಈ ನಿಟ್ಟಿನಲ್ಲಿ ಸಮಾಜವೇ ಬೆಚ್ಚಿಬೀಳುವಂತಾಗಿದೆ. ಈ ಹಿನ್ನಲೆಯಲ್ಲಿ ಈ ರೀತಿಯ ದುರ್ಘಟನೆಗಳನ್ನು ಸರ್ಕಾರ/ ಇಲಾಖೆಯು ತುಂಬಾ ಗಂಭೀರವಾಗಿ ಪರಿಗಣಿಸಿದ್ದು, ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ತಡೆಗಟ್ಟಲು/ ಹತ್ತಿಕ್ಕಲು ಕೆಳಗೆ ತಿಳಿಸಿರುವ ಕ್ರಮಗಳನ್ನು ಅನುಸರಿಸಿ, ಶಾಲೆಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿಸುವ ಮೂಲಕ ಎಲ್ಲಾ ಜಿಲ್ಲಾ ಸ್ಥಳೀಯ ಪ್ರಾಧಿಕಾರಿಗಳಿಗೆ ಈ ಮೂಲಕ ಆದೇಶಿಸಿದೆ ಹಾಗೂ ಈ ಬಗ್ಗೆ ಮೇಲುಸ್ತುವಾರಿಯನ್ನು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಸಮಯೋಚಿತವಾಗಿ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

1. ಪ್ರತಿಯೊಂದು ಶಾಲೆಯು ಆಯಾ ಶಾಲಾ ವ್ಯಾಪ್ತಿಯ ಪೋಲೀಸ್ ಠಾಣೆಯಲ್ಲಿ ಶಾಲೆಯ ಹೆಸರು ಮತ್ತು ವಿಳಾಸದ ಮಾಹಿತಿ ನೀಡುವುದು.
2. ಶಾಲಾ ಆಡಳಿತ ಮಂಡಳಿಯ ಪದಾಧಿಕಾರಿಗಳ ಹೆಸರು ಮತ್ತು ಪೂರ್ಣ ವಿಳಾಸವನ್ನು ಪೋಲೀಸ್ ಠಾಣೆಯಲ್ಲಿ ಮಾಹಿತಿಯನ್ನು ನೀಡುವುದು.
3. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು/ಸಿಬ್ಬಂದಿಯ ವಿವರಗಳನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಶಾಲಾ ವ್ಯಾಪ್ತಿಯ ಪೋಲೀಸ್ ಠಾಣೆಯಲ್ಲಿ ದಾಖಲಿಸುವುದು.

**ಪ್ರತೀ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲಿನ ಲೈಂಗಿಕ ಕಿರುಕುಳ ಇತರೆ ದೌರ್ಜನ್ಯಗಳ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ 'ಮಕ್ಕಳ ಸುರಕ್ಷ ಸಮಿತಿ'ಯನ್ನು ಶಾಲಾಮಟ್ಟದಲ್ಲಿ ರಚಿಸತಕ್ಕದ್ದು.**

ಸಮಿತಿಯಲ್ಲಿ ನಾಲ್ಕರಿಂದ ಐದು ಸದಸ್ಯರಿರಬಹುದಾಗಿದ್ದು, ಅಧ್ಯಕ್ಷರು ಆಯಾ ಶಾಲೆಯ ಮುಖ್ಯಸ್ಥರಾಗಿದ್ದು, ಶಿಕ್ಷಕರು, ವಿದ್ಯಾರ್ಥಿಯ ಪೋಷಕರು , ಮಕ್ಕಳು, ಭದ್ರತೆ ಒದಗಿಸುವ ಸಿಬ್ಬಂದಿ, ಮಕ್ಕಳ ಅಭಿವೃದ್ಧಿಯಲ್ಲಿ ಆಸಕ್ತಿ ಇರುವ ಒಬ್ಬ ಶಾಲೆಗೆ ಸಂಬಂಧಪಡದ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು.

..............2

**ಪೋಷಕರ ಜವಾಬ್ದಾರಿಗಳು:**

- ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸುವಾಗ ಯಾವುದೇ ವ್ಯಕ್ತಿಯ ಜೊತೆಗೆ ಸಂಭಾಷಣೆ ಮತ್ತು ಸ್ನೇಹ ಮಾಡದಂತೆ ಮಕ್ಕಳಿಗೆ ಮನವರಿಕೆ ಮಾಡುವುದು ಹಾಗೂ ಮಗುವಿಗೆ ಮತ್ತು ಪೋಷಕರಿಗೆ ಪರಿಚಯವಿರುವ ವ್ಯಕ್ತಿಯಾಗಿದ್ದರೂ ಕೂಡ ಪೋಷಕರ ಗಮನಕ್ಕೆ ಬಾರದೆ ಯಾವುದೇ ವಿಚಾರವನ್ನು ಪ್ರಸ್ತಾಪಿಸದಂತೆ/ಸಲುಗೆಯಿಂದ ಇರದಂತೆ ಮಕ್ಕಳಿಗೆ ಮನವರಿಕೆ ಮಾಡುವುದು.
- ಬಾಲಕಿಯರ/ ಮಹಿಳೆಯರ ಮೊಬೈಲ್‌ಗೆ ಲೈಂಗಿಕ ಪ್ರಚೋದನೆಯ ಬಗ್ಗೆ ಎಸ್.ಎಂ.ಎಸ್. ಸಂದೇಶ ಅಥವಾ ಇನ್ನಿತರ ಅನುಚಿತ ಮಾರ್ಗದಲ್ಲಿ ರವಾನೆಯಾಗಬಹುದಾದ/ ತಿಳಿಸಬಹುದಾದ ಅಸಹ್ಯಕರ ದೃಶ್ಯಗಳು/ ಚಿತ್ರಗಳನ್ನು ಕಳುಹಿಸುವುದು ಕಂಡು ಬಂದಲ್ಲಿ ಕೂಡಲೇ ತಾನಿರುವ ಸಮೀಪದ ಪೊಲೀಸ್ ಠಾಣೆಗೆ ದೂರು ನೀಡುವುದು.
- ಪೋಷಕರು ತಮ್ಮ ಮಕ್ಕಳನ್ನು ಆದಷ್ಟು ಮನೆಯ ಸಮೀಪದ ಶಾಲೆಗಳಲ್ಲಿಯೇ ದಾಖಲು ಮಾಡುವುದು.

**ಶಾಲಾ ಮುಖ್ಯಸ್ಥರ ಮತ್ತು ಖಾಸಗಿ ಶಾಲಾ ಆಡಳಿತ ಮಂಡಳಿಯ ಜವಾಬ್ದಾರಿ:**

- ಶಾಲಾ ಆಡಳಿತ ಮಂಡಳಿಯು ಮಕ್ಕಳನ್ನು ಸಂಬಂಧಪಟ್ಟ ಪೋಷಕರು/ಪೋಷಕರ ಸಂಬಂಧಿಕರು (ಅಧಿಕೃತ ಗುರುತಿನ ಚೀಟಿ ಹೊಂದಿರುವ)ಬಂದಾಗ ಮಾತ್ರ ಮಕ್ಕಳನ್ನು ಶಾಲೆಯಿಂದ ಹೊರಗೆ ಕಳುಹಿಸುವುದು.
- ಅಪ್ರಾಪ್ತ ವಿದ್ಯಾರ್ಥಿನಿಯರನ್ನು ಒಂಟಿಯಾಗಿ ಪುರುಷ ಸಿಬ್ಬಂದಿವರ್ಗದೊಂದಿಗೆ ಇರದಂತೆ ನೋಡಿಕೊಳ್ಳುವುದು.
- ತುರ್ತು ಪರಿಸ್ಥಿತಿಗಳಲ್ಲಿ ಶಾಲೆಯ ಮಹಿಳಾ ಶಿಕ್ಷಕರನ್ನೇ ಅಧಿಕೃತ ಪ್ರತಿನಿಧಿಯಾಗಿ ಪ್ರಾಂಶುಪಾಲರು ನೇಮಿಸಿ ಸಂಬಂಧಿಸಿದ ಮಹಿಳಾ ವಿದ್ಯಾರ್ಥಿಯ ಪೋಷಕರು ಬರುವವರೆಗೂ ಪರಿಸ್ಥಿತಿಯ ಬಗ್ಗೆ ನಿಗಾವಹಿಸಲು ಸೂಚಿಸುವುದು.
- ಮಕ್ಕಳು ವಿದ್ಯಾಭ್ಯಾಸ ಮಾಡುವ ತರಗತಿಗಳಲ್ಲಿ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳನ್ನು ಒಂದೇ ವಿಭಾಗದಲ್ಲಿ ಕೂರಿಸದೇ ಪ್ರತ್ಯೇಕವಾಗಿ ಕೂರುವಂತೆ ವ್ಯವಸ್ಥೆ ಮಾಡುವುದು.
- ಶಾಲಾ ಆಡಳಿತ ಮಂಡಳಿಯು ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಿ ಪರಸ್ಪರ ಶೌಚಾಲಯಗಳು ಸಾಧ್ಯವಾದಷ್ಟು ದೂರವಿರುವಂತೆ ನಿರ್ಮಿಸುವುದು. ಮಹಿಳಾ ಶೌಚಾಲಯಗಳ ಬಳಿ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಹಿಳಾ ಆಯಾಗಳನ್ನು ನೇಮಕ ಮಾಡಿಕೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಸಾರಿಗೆ ಸುರಕ್ಷತೆ, ಹೌಸ್ ಕೀಪಿಂಗ್, ಮತ್ತು ಕ್ಯಾಂಟೀನ್ ಗಳಲ್ಲಿ ಕರ್ತವ್ಯ ನಿರ್ವಹಿಸಲು ನೇಮಿಸಿಕೊಳ್ಳುವ ನೌಕರರುಗಳನ್ನು ಪ್ರತಿಷ್ಠಿತ ಹೊರಗುತ್ತಿಗೆಯ ಏಜನ್ಸಿಗಳಿಂದಲೇ ನೇಮಿಸಿಕೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ನೇಮಕ ಮಾಡಿಕೊಂಡಿರುವ ನೌಕರರುಗಳ ಬಗ್ಗೆ ಹೊರಗುತ್ತಿಗೆ ಏಜನ್ಸಿರವರು ಪೊಲೀಸ್ ಇಲಾಖೆಯಿಂದ ಪರಿಶೀಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಮಹಿಳೆ ಮತ್ತು ಪುರುಷ ಭದ್ರತಾ ಸಿಬ್ಬಂಧಿಗಳನ್ನು ನೇಮಕ ಮಾಡಿಕೊಂಡು ಶಾಲೆಯ ಆವರಣ/ಬಾಗಿಲುಗಳಲ್ಲಿ ಶಾಲಾ ಅವಧಿಯಲ್ಲಿ ಪರಿಶೀಲಿಸಲು ಕ್ರಮ ವಹಿಸುವುದು
- ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೋಲಿಸ್ ಘಟಕಗಳ ಕಾರ್ಯವ್ಯಾಪ್ತಿಯ ದೂರವಾಣಿ ಸಂಖ್ಯೆಗಳನ್ನು ಸೂಚನಾ ಫಲಕದಲ್ಲಿ ಹಾಕುವುದು.

..............3

- ಶಾಲಾ ಆಡಳಿತ ಮಂಡಳಿಯು ಶಾಲೆ ಮುಗಿದ ನಂತರ ಯಾವುದೇ ವಿದ್ಯಾರ್ಥಿ/ನೌಕರರು ಶಾಲಾ ಆವರಣ ಮತ್ತು ಕೊಠಡಿಗಳಲ್ಲಿ ಇಲ್ಲದೇ ಇರುವ ಬಗ್ಗೆ ಪ್ರತಿದಿನವೂ ಭದ್ರತಾ ಸಿಬ್ಬಂದಿಯಿಂದ ವರದಿಯನ್ನು ಪ್ರಾಂಶುಪಾಲರು/ಹಿರಿಯ ಶಿಕ್ಷಕರಿಗೆ ಸಲ್ಲಿಸುವಂತೆ ಕ್ರಮ ವಹಿಸುವುದು.
- ಮಕ್ಕಳು ಪ್ರತಿದಿನವೂ ಬಳಸುವ ದ್ವಿಚಕ್ರ ವಾಹನ/ಆಟೋ/ಕ್ಯಾಬ್ ಅಥವಾ ಇತರೆ ಯಾವುದೇ ಸಾರಿಗೆ ವ್ಯವಸ್ಥೆಯಲ್ಲಿನ ಕರ್ತವ್ಯ ನಿರ್ವಹಿಸುವ ನೌಕರರ ನಡತೆಯು ತೃಪ್ತಿಕರವಾಗಿದೆ ಎನ್ನುವ ಬಗ್ಗೆ ವರದಿಯನ್ನು ಶಾಲೆಗೆ ತಲುಪಿಸುವಂತೆ ಶಾಲಾ ಆಡಳಿತ ಮಂಡಳಿಯು ಪೋಷಕರಿಗೆ ಸುತ್ತೋಲೆ ನೀಡುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಆಟದ ಮೈದಾನ, ಕೊಠಡಿ, ಕ್ಯಾಂಟೀನ್, ಶಾಲಾ ಆವರಣ, ಶೌಚಾಲಯ ಮತ್ತು ಇತರೆ ಶಾಲಾ ಪರಿಸರದಲ್ಲಿ ಅನಧಿಕೃತ ವ್ಯಕ್ತಿಗಳು ಅನುಮಾನಾಸ್ಪದವಾಗಿ ಕಂಡುಬಂದಲ್ಲಿ ಅಂತಹ ವ್ಯಕ್ತಿಗಳನ್ನು ತಪಾಸಣೆ ಮಾಡಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಚಲನ-ವಲನ, ಮಕ್ಕಳು ಶಾಲೆಗೆ ಬರುವಾಗ ಮತ್ತು ತೆರಳುವಾಗ, ಆಟವಾಡುವ ಸಂದರ್ಭದಲ್ಲಿ, ಶೌಚಾಲಯಕ್ಕೆ ತೆರಳುವ ಸಂದರ್ಭಗಳಲ್ಲಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ರೊಟೇಶನ್ ಆಧಾರದ ಮೇಲೆ ಜಾಗೃತಾಧಿಕಾರಿಗಳನ್ನಾಗಿ ನೇಮಿಸಿ ಮಕ್ಕಳ ಚಲನ ವಲನಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಲು ಕ್ರಮ ವಹಿಸುವುದು
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳನ್ನು ಕತ್ತಲೆ ಕೋಣೆ/ಇತರೆ ಶಿಕ್ಷೆಯನ್ನು ನೀಡದಂತೆ ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಭದ್ರತೆ ಮತ್ತು ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಆಂತರಿಕವಾಗಿ ಶಾಲೆಯ ಸಿಬ್ಬಂದಿ, ಪೋಷಕರು,ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ವಿಚಕ್ಷಣಾ ದಳದ ಸಮಿತಿಯನ್ನು ರಚಿಸಿ ಕಾಲಕಾಲಕ್ಕೆ ಸಭೆ ಸೇರಿ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಪೋಷಕರೊಬ್ಬರನ್ನು ಸಂಯೋಜಕರನ್ನಾಗಿ ನೇಮಿಸಿ ಮಕ್ಕಳ ಮತ್ತು ಶಾಲೆಯ ಆಗುಹೋಗುಗಳ ಬಗ್ಗೆ ರಹಸ್ಯವಾಗಿ ಆಡಳಿತ ಮಂಡಳಿಗೆ ವರದಿ ಸಲ್ಲಿಸುವಂತೆ ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿನ ಮಕ್ಕಳ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಶಿಕ್ಷಕರು ಮತ್ತು ಶಾಲೆಯ ಸಿಬ್ಬಂದಿವರ್ಗದವರ ಸಭೆಯನ್ನು ಕಾಲಕಾಲಕ್ಕೆ ನಡೆಸಿ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.
- ತರಗತಿಯ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಊಟದ ನಂತರ ಹಾಗೂ ಶಾಲೆಯು ಮುಕ್ತಾಯವಾದ ನಂತರ ದಾಖಲಾತಿಯನ್ನು ತೆಗೆದುಕೊಳ್ಳುವುದು. ಯಾವುದಾದರೂ ವಿದ್ಯಾರ್ಥಿಯು ಶಾಲಾವಧಿಯ ಮಧ್ಯದಲ್ಲಿ ಗೈರುಹಾಜರಾಗಿದ್ದು ಕಂಡುಬಂದಲ್ಲಿ ಕೂಡಲೇ ಸಂಬಂಧಪಟ್ಟ ಪೋಷಕರಿಗೆ ಹಾಗೂ ಸಂಬಂಧಪಟ್ಟ ಪೊಲೀಸ್ ಠಾಣೆಗೆ ತಿಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿ ಬಳಸುವ ವಾಹನಗಳಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು/ಶಾಲೆಗೆ ಸಂಬಂಧಪಡದೇ ಇರುವ ವ್ಯಕ್ತಿಗಳನ್ನು ಕರೆದೊಯ್ಯಬಾರದಾಗಿ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ವಹಿಸುವುದು.
- ಶಾಲಾ ಆಡಳಿತ ಮಂಡಳಿಯು ಶಾಲೆಯಲ್ಲಿ ಬಳಸುವ ವಾಹನಗಳಲ್ಲಿ ಮಕ್ಕಳನ್ನು ಯಾವ ಸ್ಥಳದಿಂದ

..............4

ಶಾಲೆಗೆ ಕರೆದೊಯ್ಯುತ್ತಾರೆಯೋ ಅದೇ ಸ್ಥಳದಲ್ಲಿ/ನಿರ್ದಿಷ್ಟ ಸ್ಥಳವನ್ನು ಹೊರತುಪಡಿಸಿ ಮಧ್ಯದಲ್ಲಿ ಬೇರೆ ಯಾವುದೇ ಸ್ಥಳದಲ್ಲಿ ಮಕ್ಕಳನ್ನು ವಾಹನದಿಂದ ಇಳಿಸದಂತೆ ಕಟ್ಟುನಿಟ್ಟಾಗಿ ವಾಹನದ ಚಾಲಕ ಮತ್ತು ಸಿಬ್ಬಂದಿಗೆ ಸೂಚಿಸುವುದು.

- ಬಾಲಕಿಯರ/ ಮಹಿಳೆಯರಿಗೆ ಈ ಸಂಬಂಧದ ಯಾವುದೇ ಗೊತ್ತಿರುವ ಅಥವಾ ಗೊತ್ತಿಲ್ಲದ ವ್ಯಕ್ತಿಯ ನಡತೆಯ ಬಗ್ಗೆ ಅನುಮಾನ ಬಂದಲ್ಲಿ ಸಮಿತಿಗೆ ದೂರು ನೀಡುವಂತೆ ಜಿಲ್ಲಾ ಆಡಳಿತವು ವ್ಯಾಪಕ ಪ್ರಚಾರ ಮಾಡುವುದು.
- ವಸತಿ ಶಾಲೆಯ ವಿದ್ಯಾರ್ಥಿಗಳ ಮತ್ತು ಇತರೆ ಶಾಲೆಯ ವಿದ್ಯಾರ್ಥಿಗಳ ದೂರುಗಳ ಬಗ್ಗೆ ಸಮಿತಿಯು ಪ್ರತೀ ಮಾಹೆ ಪೋಷಕರು ಮತ್ತು ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಪರಾಮರ್ಶಿಸುವುದು.
- ಜನರಹಿತ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಸರ್ಕಾರದ ಅಧಿಕೃತ ಪರವಾನಿಗೆ ಪಡೆದಿರುವ ಭದ್ರತಾ ಏಜನ್ಸಿಯವರಿಂದ ಭದ್ರತಾ ಸಿಬ್ಬಂದಿಯನ್ನು ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳುವುದು.
- ಶಾಲಾ ಮಕ್ಕಳು ಮಾದಕ ವಸ್ತು ಸ್ವೀಕರಿಸಿ, ಮಾದಕ ವ್ಯಸನಿಗಳಾಗದಂತೆ ತಡೆಗಟ್ಟಲು ಶಾಲಾ ಪರಿಸರವನ್ನು ನಿರ್ವಹಿಸುವುದು.
- ಶಾಲೆಯ ಎಲ್ಲಾ ಭಾಗದಲ್ಲೂ ಬೆಳಕಿನ(ವಿದ್ಯುಚ್ಛಕ್ತಿ) ವ್ಯವಸ್ಥೆ ಕಲ್ಪಿಸುವುದು.
- ಶಾಲೆಯ ಪ್ರತಿಯೊಂದು ಕೊಠಡಿ, ಶಾಲಾ ಆವರಣ/ ಶಾಲಾ ಅಂಕಣದಲ್ಲಿ ಪ್ರಚಲಿತ ದೃಶ್ಯಾವಳಿಗಳನ್ನು ಸೆರೆಹಿಡಿಯುವ ಸಿ.ಸಿ. ಕ್ಯಾಮರಗಳನ್ನು ಅಳವಡಿಸುವುದು. ಪ್ರತಿ ಕ್ಷಣಕ್ಷಣದ ಮಾಹಿತಿಗಳನ್ನು ಗಮನಿಸಿ ವರದಿ ಮಾಡಲು ಪಾಳೀಯ ಪದ್ಧತಿಯಲ್ಲಿ ಇಬ್ಬರು ಸಿಬ್ಬಂದಿಯನ್ನು ನೇಮಕ ಮಾಡುವುದು.
- ಶಾಲಾ ವಿದ್ಯಾರ್ಥಿನಿ/ ಮಹಿಳಾ ಸಿಬ್ಬಂದಿಯನ್ನು ತಮ್ಮ ವಾಸ್ತವ್ಯ ಸ್ಥಳಕ್ಕೆ ಬಿಡುವ ಸಂದರ್ಭದಲ್ಲಿ ಕಡೆಯವರನ್ನಾಗಿ ಪರಿಗಣಿಸದೆ ಮೊದಲ ಆದ್ಯತೆಯ ಮೇಲೆ ಅವರ ವಾಸ್ತವ್ಯಕ್ಕೆ ಬಿಡುವುದು.
- ಶಾಲಾ ಮಕ್ಕಳ ಶೈಕ್ಷಣಿಕ ಪ್ರವಾಸದಲ್ಲಿ ಇಬ್ಬರು ಮಹಿಳಾ ಶಿಕ್ಷಕರು ಮತ್ತು ಇಬ್ಬರು ಪುರುಷ ಶಿಕ್ಷಕರು ಕಡ್ಡಾಯವಾಗಿ ವಿದ್ಯಾರ್ಥಿಗಳೊಂದಿಗೆ ತೆರಳುವುದು.
- ಶಾಲಾ ಅವಧಿ ಮುಗಿದ ನಂತರ ವಿದ್ಯಾರ್ಥಿಗಳು ಒಂಟಿಯಾಗಿ ತೆರಳುವ ಬದಲು ಗುಂಪಿನಲ್ಲಿ ತೆರಳುವುದು.
- ಮಕ್ಕಳ ಸಹಾಯವಾಣಿ ಉಚಿತ ದೂರವಾಣಿ 24X7 ಸಂಖ್ಯೆ 1098 ನ್ನು ಪ್ರತಿ ಕೊಠಡಿಯಲ್ಲಿ ಪ್ರಚುರ ಪಡಿಸುವುದು. ಮಕ್ಕಳ ದಿನಚರಿ ಪುಸ್ತಕದಲ್ಲಿ ನಮೂದಿಸುವುದು.
- ಎಲ್ಲಾ ಶಾಲೆಗಳು, ವಿದ್ಯಾರ್ಥಿ ನಿಲಯಗಳಲ್ಲಿ ಹಾಗೂ ವಸತಿ ಶಾಲೆಗಳಲ್ಲಿ ಸಂದರ್ಶಿಸುವ ಸಂದರ್ಶಕರ ಹೆಸರು ಮತ್ತು ವಿಳಾಸಗಳನ್ನು ದಾಖಲಿಸುವುದು.
- ಶಾಲೆಗಳು ಇಲಾಖಾ ನಿಗದಿತ ಶಾಲಾ ಸಮಯವನ್ನು ಪಾಲಿಸುವುದು.
- ಶಾಲಾ ಆಡಳಿತ ವರ್ಗ, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು ಮತ್ತು ಸೇವೆಗಳನ್ನು ಒದಗಿಸುವವರು ಇವರಿಗೆ **ಪಾಕ್ಸೋ ಕಾಯ್ದೆ 2012ರ** ಬಗ್ಗೆ ಅರಿವು ಕಾರ್ಯಾಗಾರಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳುವುದು.
- ಮಕ್ಕಳಿಗೆ ನಿಲುಕುವಂತಹ ಎತ್ತರದಲ್ಲಿ ದೂರು /ಸಲಹಾ ಪೆಟ್ಟಿಗೆಗಳನ್ನು ಹಾಕುವುದು, ವಾರಕ್ಕೊಂದು ಸಲ ಶಾಲಾ ಸುರಕ್ಷಿತ ಸಮಿತಿಯು ಪರಿಶೀಲಿಸಿ ಕ್ರಮಕ್ಕೆಗೊಳ್ಳುವುದು.
- ಸಿಬ್ಬಂದಿ ಹಾಗೂ ಶಾಲೆಗೆ ಸೇವೆ ಒದಗಿಸುತ್ತಿರುವವರ ಅಂದರೆ ಚಾಲಕರು, ಆಯಾ, ಆಹಾರ ವಿತರಕರು, ಅಡುಗೆಯವರು, ಆಯಾ, ಸ್ವಚ್ಛತಾ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಇವರಿಗೆ ಗುರುತಿನ ಚೀಟಿಗಳನ್ನು ನೀಡುವುದು ಹಾಗೂ ಅವರ ಭಾವ ಚಿತ್ರಗಳನ್ನು, ವಿವರಗಳನ್ನು ಶಾಲಾ ಸೂಚನಾಫಲಕದಲ್ಲಿ ಹಾಕುವುದು.

..............5

- ಎಲ್ಲಾ ಮಕ್ಕಳಿಗೆ ವಯಸ್ಸಿಗನುಗುಣವಾಗಿ ವೈಯಕ್ತಿಕ ಸುರಕ್ಷತೆ ಮತ್ತು ದೌರ್ಜನ್ಯಗಳ ಬಗ್ಗೆ ತಿಳಿಸಿಕೊಡುವುದು(Safe and Unsafe Touch).
- ಶಿಕ್ಷಕರು ಮತ್ತು ಆಡಳಿತ ಮಂಡಳಿ, ಶಾಲೆ ಬಿಟ್ಟನಂತರ, ರಜೆದಿನಗಳಲ್ಲಿ ವೈಯುಕ್ತಿಕವಾಗಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಣ, ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳಲ್ಲದೆ ಬೇರೆ ವಿಷಯಗಳ ಬಗ್ಗೆ ಒಂಟಿಯಾಗಿ. ನಿರ್ಜನ ಪ್ರದೇಶಗಳಲ್ಲಿ ವ್ಯವಹರಿಸತಕ್ಕದ್ದಲ್ಲ.
- ಶಾಲೆಯಲ್ಲಿ ಅವಘಡಗಳು ಉಂಟಾಗಬಹುದಾದ ಭೌತಿಕ ಸ್ಥಳಗಳನ್ನು (ಕಟ್ಟಡ, ಪಡಸಾಲೆ, ಹೊರಗೆ ಹೋಗುವ ಮತ್ತು ಬರುವ ದ್ವಾರಗಳು, ದಾಸ್ತಾನು ಕೊಠಡಿ, ಬೆಂಕಿ, ನೀರಿನ ತೊಟ್ಟಿ, ಮೋಟಾರ್/ಜನರೇಟರ್ ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಅಡುಗೆ ಕೋಣೆ, ಬಾಲ್ಕನಿ, ಪ್ಯಾರಪಟ್ ಗೋಡೆ, ತೆರೆದ ಚರಂಡಿ, ಇತ್ಯಾದಿ) ಗುರುತು ಮಾಡಬೇಕು.
- ಯಾವುದೇ ಅಹಿತಕರ ಘಟನೆಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಸುರಕ್ಷತೆಗಾಗಿ ಸಂಪರ್ಕಿಸುವುದು.

**ಮಕ್ಕಳ ಸುರಕ್ಷ ಯೋಜನೆ ಮತ್ತು ಕ್ರಿಯಾ ಯೋಜನೆ (Child Safety /Protection Plan and Action Plan)**

1. ಪ್ರತಿ ಶಾಲೆಯಲ್ಲಿ, ಪ್ಲೇಹೋಂಗಳಲ್ಲಿ, ಮಾಂಟೆಸರಿ ಶಾಲೆಗಳಲ್ಲಿ, ಸರ್ಕಾರಿ ಶಾಲೆ/ವಸತಿ ನಿಲಯಗಳಲ್ಲಿ, ಖಾಸಗಿ ಶಾಲೆ, ಸ್ವಯಂ ಸೇವಾ ಸಂಸ್ಥೆಗಳಲ್ಲಿ, ಧಾರ್ಮಿಕ ಮತ್ತು ಧರ್ಮ ಸಂಸ್ಥೆಗಳಲ್ಲಿ, ಅನುದಾನಿತ ಸಂಸ್ಥೆಗಳಲ್ಲಿ **'ಮಕ್ಕಳ ಸುರಕ್ಷ ಯೋಜನೆ'**ಯನ್ನು ಸಿದ್ಧಪಡಿಸುವುದು.
2. ಸುರಕ್ಷ ಯೋಜನೆಯು ಮಗುವಿನ ಒಳಿತಿನ ಸುರಕ್ಷತೆಯನ್ನು ಒದಗಿಸುವ ದೃಷ್ಟಿಹೊಂದಿರುತ್ತದೆ.
3. ಪ್ರತಿ ಶಾಲೆಯು ಸಂಸ್ಥೆಗೆ ತಾತ್ಕಾಲಿಕ ಅಥವಾ ಖಾಯಂ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಾದ ಸಂದರ್ಭಗಳಲ್ಲಿ ಅಭ್ಯರ್ಥಿ ಹೊಂದಿರಬೇಕಾದ ಮಾನದಂಡಗಳ ಬಗ್ಗೆ ಸ್ಪಷ್ಟಪಡಿಸತಕ್ಕದ್ದು
4. ಪ್ರತಿ ಶಾಲೆಯು ಪೋಷಕ/ಶಿಕ್ಷಕ ಸಮಿತಿಯನ್ನು ಕಡ್ಡಾಯವಾಗಿ ರಚಿಸುವುದು, (ಮೊದಲನೇ ಪುಟದ ಕಡೇ ಪ್ಯಾರದಂತೆ)
5. ಮಕ್ಕಳ ಸುರಕ್ಷಾ ಯೋಜನೆ ಮಗುವಿನ ಸುರಕ್ಷತೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ತುರ್ತು ಸಂದರ್ಭಗಳಲ್ಲಿ (ಗಂಭೀರ ಅಥವಾ ಗಂಭೀರವಲ್ಲದ ಪ್ರಕರಣಗಳಲ್ಲೂ) ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸತಕ್ಕದ್ದು.
6. ಶಾಲಾ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಅನುಸರಿಸಬೇಕಾದ ನಿಯಮ ಹಾಗೂ ಮಾರ್ಗಸೂಚಿಗಳನ್ನು ಸ್ಪಷ್ಟಪಡಿಸತಕ್ಕದ್ದು.
7. ಸುರಕ್ಷಾ ಯೋಜನೆಯು ಪೋಷಕರ ಮತ್ತು ಮಕ್ಕಳ ಜವಾಬ್ದಾರಿಯನ್ನು ಸ್ಪಷ್ಟಪಡಿಸತಕ್ಕದ್ದು ಹಾಗೂ ಈ ಬಗ್ಗೆ ಪೋಷಕ ಮತ್ತು ಶಿಕ್ಷಕರ ಸಭೆಗಳಲ್ಲಿ ನಿಯಮಿತವಾಗಿ ಚರ್ಚಿಸುವುದು. ಹಾಗೂ ಅಗತ್ಯ ಕ್ರಮ ವಹಿಸುವುದು.
8. ಶಾಲೆಯ ಮಕ್ಕಳ ರಕ್ಷಣಾ ಅಧಿಕಾರಿ ಅಥವಾ ಸಮಾಲೋಚಕರು, ಘಟನೆ ನಡೆದಿದ್ದಲ್ಲಿ ಅಥವಾ ಘಟನೆ ನಡೆಯಬಹುದಾದ ಸನ್ನಿವೇಶಗಳಲ್ಲಿ ವರದಿಯನ್ನು ಕೂಡಲೇ ಸಿದ್ಧಪಡಿಸಿ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಿಗೆ, ಜಿಲ್ಲಾ ಶಿಕ್ಷಣ ಅಧಿಕಾರಿಗಳು ಮತ್ತು ತಮ್ಮ ಕಾರ್ಯವ್ಯಾಪ್ತಿಯ ಪೋಲಿಸ್ ಠಾಣೆಯ ಮಕ್ಕಳ ಕಲ್ಯಾಣ ಅಧಿಕಾರಿಗೆ ಸಲ್ಲಿಸುವುದು.
9. ಇಂತಹ ಸನ್ನಿವೇಶಗಳ ಬಗ್ಗೆ ತುರ್ತುಕ್ರಮ ತೆಗೆದುಕೊಳ್ಳುವುದು
   ಅ. ಮಗು ಯಾವುದಾದರು ಶಾಲೆಗೆ ಸಂಬಂಧಿಸಿದ ಅಥವಾ ಸಂಬಂಧ ಇಲ್ಲದ ವ್ಯಕ್ತಿಯ ಬಗ್ಗೆ ದೈಹಿಕ/ಲೈಂಗಿಕ ದೌರ್ಜನ್ಯಗಳ ಬಗ್ಗೆ ದೂರು ನೀಡಿದ್ದಲ್ಲಿ,
   ಆ. ಮಗುವಿನ ವರ್ತನೆ, ಪ್ರಗತಿಯಲ್ಲಿ ಬದಲಾವಣೆ ಕಂಡು ಬಂದಲ್ಲಿ ಹಾಗೂ ದೇಹದಲ್ಲಿ ಗಾಯಗಳು ಆಗಿದ್ದಲ್ಲಿ,
   ಇ. ಶಾಲೆಯ ಒಳಗೆ ಅಥವಾ ಹೊರಗೆ ಚುಡಾಯಿಸಿದಲ್ಲಿ/ ರ್‍ಯಾಂಗಿಗ್ ಮಾಡಿದಲ್ಲಿ,

ಶಾಲೆಗಳಲ್ಲಿ ಮಕ್ಕಳ ಸುರಕ್ಷಾ ಯೋಜನೆ ರಚನೆ ಮತ್ತು ಅನುಷ್ಠಾನದ ಕುರಿತು ಸಕ್ಷಮ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ತಜ್ಞರ ಸಮಿತಿಯಿಂದ ನಿಯಮಿತವಾಗಿ ಪರಿಶೀಲನೆ ಮಾಡುವುದು. ಸದರಿಯವರಿಗೆ ಶಾಲೆಗಳಿಗೆ ಭೇಟಿ ನೀಡಲು ಮತ್ತು ಸಿಬ್ಬಂದಿ ಮತ್ತು ಮಕ್ಕಳೊಡನೆ ಸಂಭಾಷಿಸಲು, ಮಕ್ಕಳ ಸಂಕಷ್ಟ ಪರಿಸ್ಥಿತಿಯ ಅಂಶಗಳ ಬಗ್ಗೆ ಪರಿಶೀಲಿಸಲು ಜವಾಬ್ದಾರಿ ನೀಡಲಾಗುವುದು.

**ಪೊಲೀಸ್ ಇಲಾಖೆಯಿಂದ ಕೈಗೊಳ್ಳಬೇಕಾದ ಕ್ರಮಗಳು:**

- ತಮ್ಮ ಠಾಣಾ ವ್ಯಾಪ್ತಿಗೆ ಬರುವಂತಹ ಶಾಲೆಗಳ ಆಡಳಿತ ಮಂಡಳಿಗಳ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ವಿಳಾಸ/ ದೂರವಾಣಿ ವಿವರಗಳನ್ನು ಠಾಣೆಯಲ್ಲಿ ಸಂಗ್ರಹಿಸುವುದು.
- ಶಾಲೆಗಳಲ್ಲಿ ಮಕ್ಕಳ ಮೇಲೆ ನಡೆಯುವಂತಹ ಯಾವುದೇ ಮಾನಸಿಕ ಮತ್ತು ದೈಹಿಕ ಶಿಕ್ಷೆ/ ದೌರ್ಜನ್ಯ/ ಲೈಂಗಿಕ ಕಿರುಕುಳ/ ಮುಂತಾದ ಅಹಿತಕರ ಘಟನೆಗಳು ಸಂಭವಿಸಿದಾಗ ಕೂಡಲೇ ಸಂಬಂಧಿಸಿದ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿ ತ್ವರಿತ ಕ್ರಮ ಕೈಗೊಳ್ಳುವುದು.
- ಪೊಲೀಸ್ ಠಾಣೆಗಳಿಗೆ ಮಕ್ಕಳಿಂದ/ ಪೋಷಕರಿಂದ ಮತ್ತು ಮಹಿಳಾ ಸಿಬ್ಬಂಧಿಯಿಂದ ಶಾಲೆ ಮತ್ತು ಮಕ್ಕಳ ಕುರಿತು ಬರುವ ದೂರುಗಳನ್ನು ಕೂಡಲೇ ಸ್ವೀಕರಿಸಿ, ಪರಿಶೀಲಿಸಿ ತ್ವರಿತ ಕ್ರಮ ಕೈಗೊಳ್ಳುವುದು.
- ಪೊಲೀಸ್ ಸಿಬ್ಬಂದಿಯು ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳ ಮೇಲೆ ಕಿರುಕುಳ/ ಚುಡಾಯಿಸುವುದು/ ಲೈಂಗಿಕ ಪ್ರಚೋದನೆ ಮುಂತಾದ ಘಟನೆಗಳು ಕಂಡುಬಂದಲ್ಲಿ ಸ್ಥಳದಲ್ಲಿಯೇ ಈ ಬಗ್ಗೆ ಕ್ರಮವಹಿಸುವುದು.
- ಮಕ್ಕಳಿಂದ ದೂರು ಬಂದ ಸಂದರ್ಭಗಳಲ್ಲಿ ಮಗುವಿನ ಮಾಹಿತಿಯನ್ನು ಬಹಿರಂಗ ಪಡಿಸದೇ ಅಥವಾ ವೈಯುಕ್ತಿಕವಾಗಿ ಪರಿಗಣಿಸದೇ ಸಂಬಂಧಪಟ್ಟ ಸಿಬ್ಬಂಧಿ ಮೇಲೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವುದು.

**ಶಾಲಾ ವಾಹನಗಳ ನಿರ್ವಹಣೆ:**

- ಶಾಲಾ ವಾಹನಗಳು ಕಡ್ಡಾಯವಾಗಿ ಹಳದಿ ಬಣ್ಣದಲ್ಲಿರಬೇಕು.
- ಶಾಲಾ ವಾಹನಗಳ ಹಿಂದೆ ಹಾಗೂ ಮುಂಭಾಗ ಬಾಡಿಗೆಗೆ ಪಡೆದುಕೊಂಡ ವಾಹನವಾಗಿದ್ದಲ್ಲಿ 'ಸ್ಕೂಲ್‌ಡ್ಯೂಟಿ ಮೇಲೆ' ಎಂದು ಸ್ಪಷ್ಟವಾಗಿ ನಮೂದಿಸಬೇಕು.
- ಶಾಲಾ ವಾಹನದಲ್ಲಿ ಪ್ರಥಮ ಚಿಕಿತ್ಸೆ ಬಾಕ್ಸ್ ಇರಬೇಕು.
- ಶಾಲಾ ವಾಹನದಲ್ಲಿ ನಿರ್ಧಿಷ್ಟಪಡಿಸಿದ ಗುಣಮಟ್ಟದ ವೇಗದ ಗೌರ್‍ನರ್ ಅಳವಡಿಸಬೇಕು.
- ವಾಹನದ ಕಿಟಕಿಗಳಲ್ಲಿ ಸಮತಲ ಗ್ರಿಲ್ಸ್‌ಗಳನ್ನು ಅಳವಡಿಸಿರಬೇಕು.
- ವಾಹನದಲ್ಲಿ ಬೆಂಕಿ ನಂದಿಸುವ ಅಗ್ನಿ ಶಾಮಕ ಇರಬೇಕು.
- ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ವಾಹನದ ಮೇಲೆ ಬರೆಯಬೇಕು.
- ವಾಹನದ ಬಾಗಿಲುಗಳಿಗೆ ವಿಶ್ವಾಸಾರ್ಹ ಬೀಗಗಳನ್ನು ಅಳವಡಿಸಿರಬೇಕು.
- ಶಾಲಾ ಮಕ್ಕಳನ್ನು ನೋಡಿಕೊಳ್ಳಲು ವಾಹನದಲ್ಲಿ ಒಬ್ಬ ಅಟೆಂಡರ್ ಇರಬೇಕು.
- ವಿದ್ಯಾರ್ಥಿಗಳ ತಂದೆ/ ತಾಯಿ, ಪೋಷಕರು/ ಶಾಲಾ ಶಿಕ್ಷಕರು ವಾಹನದಲ್ಲಿನ ಸುರಕ್ಷತಾ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು ವಾಹನದಲ್ಲಿ ಕುಳಿತು ಪ್ರಯಾಣಿಸಬಹುದು.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ-2009 ರ ನಿಯಮ 16 ಮತ್ತು 17(1) &(2) ರಲ್ಲಿ ಯಾವುದೇ ಮಗುವಿನ ನಿಂದನೆಯನ್ನು ಯಾವ ಸಂದರ್ಭಗಳಲ್ಲೂ ಮಾಡತಕ್ಕದಲ್ಲ ಎಂದು ತಿಳಿಸಿದೆ. ಮಕ್ಕಳಿಗೆ ದೈಹಿಕವಾಗಿ, ಮಾನಸಿಕವಾಗಿ ಶಿಕ್ಷೆ ನೀಡುವುದು, ತಾರತಮ್ಯ ಎಸಗುವುದು ಲೈಂಗಿಕ ನಿಂದನೆ ಮಾಡುವುದು ತಪ್ಪು ಎಂದು ಸಹ ತಿಳಿಸಲಾಗಿದೆ.ಈ ರೀತಿ ಮಾಡುವವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

...............7

ಮಕ್ಕಳ ತೀವ್ರತರವಾದ ಲೈಂಗಿಕ ಅಪರಾಧಗಳಿಗೆ ಇರುವ ಕಠಿಣ ಶಿಕ್ಷೆ (ಫಾಕ್ಸೋ ಕಾಯಿದೆ 2012) ಅನ್ವಯ ಶಿಕ್ಷೆ ವಿಧಿಸಲಾಗುವುದು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ 2012 ಅಧ್ಯಾಯ 2ರಲ್ಲಿ ಮಕ್ಕಳ ಮೇಲೆ ಲೈಂಗಿಕ ಅಪರಾಧಗಳನ್ನು ಶೈಕ್ಷಣಿಕ ಅಥವಾ ಧಾರ್ಮಿಕ ಸಂಸ್ಥೆಯ ಆಡಳಿತ ವರ್ಗ ಅಥವಾ ಸಿಬ್ಬಂದಿ ಯಾರಾದರೂ ಆ ಸಂಸ್ಥೆಯಲ್ಲಿರುವ ಮಗುವಿನ ಮೇಲೆ ಎಸಗಿದ್ದಲ್ಲಿ ಅಂತಹ ಅಪರಾಧವನ್ನು ಗುರುತರ/ ತೀವ್ರತರವಾದ ಅಪರಾಧವೆಂದು ಪರಿಗಣಿಸಿ ಈ ಕೆಳಗಿನಂತೆ ಶಿಕ್ಷೆ ವಿಧಿಸಲಾಗುವುದು.

| | |
|---|---|
| ಪ್ರವೇಶಿಕ ಲೈಂಗಿಕ ಅತ್ಯಾಚಾರ (ಸೆಕ್ಷನ್ 5, ಎಫ್): | ಸೆಕ್ಷನ್ 6 ರಂತೆ 10 ವರ್ಷಗಳಿಗೆ ಕಡಿಮೆ ಇಲ್ಲದ ಕಠಿಣ ಶಿಕ್ಷೆ ಅಥವಾ ಜೀವಾವಧಿಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ. |
| ಲೈಂಗಿಕ ಹಲ್ಲೆ (ಸೆಕ್ಷನ್ 9) | ಸೆಕ್ಷನ್ 10 ರಂತೆ 5 ವರ್ಷಗಳಿಗೆ ಕಡಿಮೆ ಇಲ್ಲದ ಕಠಿಣ ಶಿಕ್ಷೆ ಅಥವಾ 7 ವರ್ಷದ ವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ |
| ಲೈಂಗಿಕ ಕಿರುಕುಳ (ಸೆಕ್ಷನ್ 11) | ಸೆಕ್ಷನ್ 12 ರಂತೆ 3 ವರ್ಷದ ವರೆಗೆ ವಿಸ್ತರಿಸಬಹುದಾದ ಹಾಗು ಕಾರಾಗೃಹವಾಸ ಶಿಕ್ಷೆ ಮತ್ತು ಜುಲ್ಮಾನೆ (ಎರಡಲ್ಲೊಂದು ಬಗೆ) |
| ಕಾಮಪ್ರಚೋದಕ (ಅಶ್ಲೀಲ ಚಿತ್ರಣ) ಉದ್ದೇಶಕ್ಕಾಗಿ ಮಗುವನ್ನು ಬಳಸಿಕೊಳ್ಳುವುದು (ಸೆಕ್ಷನ್ 13) | ಸೆಕ್ಷನ್ 14 ರಂತೆ 5 ವರ್ಷದವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾವಾಸ ಶಿಕ್ಷೆ ಹಾಗೂ ಜುಲ್ಮಾನೆ ಹಾಗೂ ಎಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ 7 ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆ ಹಾಗೂ ಜುಲ್ಮಾನೆ |
| | ಕಾಯ್ದೆಯಡಿಯಲ್ಲಿ ಪ್ರಚೋದನೆಯ ಉದ್ದೇಶಗಳಿಗಾಗಿ ಹಾಗೂ ಇಂತಹ ದೂರುಗಳನ್ನು ದಾಖಲಿಸದೇ ಇದ್ದಲ್ಲಿ ಶಿಕ್ಷೆಗೆ ಅವಕಾಶ ಮಾಡಲಾಗಿದೆ. (ಸೆಕ್ಷನ್ 21) |

ಖಾಸಗಿ ಶಾಲಾ ಆಡಳಿತ ಮಂಡಳಿಗಳು ಸಂಪೂರ್ಣವಾಗಿ ತಮ್ಮ ಸಂಸ್ಥೆಯ ವ್ಯಾಪ್ತಿಯ ಶಾಲೆಗಳಲ್ಲಿ ಉತ್ತಮ ಪರಿಸರ ನಿರ್ಮಾಣ ಮಾಡಲು ಮತ್ತು ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮವಹಿಸಲು ನಿರ್ದೇಶಿಸಿದೆ. ಈ ರೀತಿಯ ಅಹಿತಕರ ಘಟನೆ/ ಪ್ರಕರಣ ನಡೆಯದಂತೆ ಸೂಕ್ತ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ;

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು;

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ವಿಭಾಗ ಇವರಿಗೆ ಕಳುಹಿಸುತ್ತಾ ಅಗತ್ಯ ಕ್ರಮವಹಿಸಲು ಸೂಚಿಸಿದೆ.
2. ಸಹ ನಿರ್ದೇಶಕರು, ಬೆಂಗಳೂರು ಮತ್ತು ಮೈಸೂರು ವಿಭಾಗ ರವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಈ ಬಗ್ಗೆ ಪರಿಶೀಲಿಸಲು ತಿಳಿಸಿದೆ.
3. ಕಛೇರಿ ಪ್ರತಿ.

ಅನುಬಂಧ-1

ಶಾಲೆಗಳಲ್ಲಿ ಮಕ್ಕಳ ಸುರಕ್ಷ ಯೋಜನೆಯನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ತಜ್ಞರ ಸಮಿತಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಪರಿಶೀಲಿಸಲು ಪ್ರತಿ ಶಾಲೆಯಲ್ಲಿ ಮಕ್ಕಳ ಸುರಕ್ಷಾ ಯೋಜನೆಯನ್ನು ರಚಿಸಿ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಬೇಕಾಗಿದೆ.ಸದರಿ ಯೋಜನೆಯ ಅನುಷ್ಠಾನ ಕುರಿತು ನಿಯಮಿತವಾಗಿ ಪರಿಶೀಲನೆ ಮಾಡಲು ಜಿಲ್ಲಾ ಮಟ್ಟದಲ್ಲಿ ತಜ್ಞರ ಸಮಿತಿಯನ್ನು ಈ ಕೆಳಕಂಡತೆ ರಚಿಸಲಾಗಿದೆ.

1. ಜಿಲ್ಲಾ ಉಪನಿರ್ದೇಶರು ಸಾರ್ವಜನಿಕ ಶಿಕ್ಷಣ ಇಲಾಖೆ.
2. ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ಜಿಲ್ಲಾ ಆರೋಗ್ಯ ಅಧಿಕಾರಿಗಳು.
4. ಡೆಪ್ಯೂಟಿ ಸೂಪರ್ ಇನ್‌ಟೆಂಡೆಂಟ್ ಆಫ್ ಪೋಲೀಸ್(DYSP).
5. ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು.
6. ಶಿಕ್ಷಣಾಧಿಕಾರಿಗಳು/ ವಿಷಯ ಪರಿವೀಕ್ಷಕರು(ಉಪನಿರ್ದೇಶಕರ ಕಛೇರಿ).
7. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು.
8. ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿಗಳು.
9. ತಾಲ್ಲೂಕ್ ಮಟ್ಟದ ಪೋಲೀಸ್ ಅಧಿಕಾರಿಗಳು
10. ಶಿಕ್ಷಣ ಸಂಯೋಜಕರು (ಬಿ.ಇ.ಒ. ಕಛೇರಿ)
11. ಮಕ್ಕಳ ಕಲ್ಯಾಣ ಸಮಿತಿ ಸದಸ್ಯರುಗಳು
12. ಬಾಲ ನ್ಯಾಯ ಮಂಡಳಿ ಸದಸ್ಯರುಗಳು
13. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾ ಅಧಿಕಾರಿಗಳು
14. ಸ್ವಯಂ ಸೇವಾ ಸಂಸ್ಥೆಯ ಪತ್ರಿನಿಧಿಗಳು (ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ, ತಾಲ್ಲೂಕಿಗೆ ಒಂದು ಸಂಸ್ಥೆ ಗುರುತಿಸಬಹುದು)

ಸಮಿತಿಯಲ್ಲಿನ ಸದಸ್ಯರಲ್ಲಿ 4 ರಿಂದ 5 ಸದಸ್ಯರನ್ನೊಳಗೊಂಡಂತೆ ತಂಡ ರಚಿಸಿಕೊಂಡು ಶಾಲೆಗಳಿಗೆ ಭೇಟಿ ನೀಡಿ ನಿಯಮಿತವಾಗಿ ಪರಿಶೀಲಿಸುವುದು.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ:ಸಿ7(2)ಪ್ರಾ.ಶಿ.ಅ./ಶಾ.ಮ.ಲೈ.ಕಿ.40/2014-15 ದಿನಾಂಕ:26.09.2014

**: :ಸುತ್ತೋಲೆ: :**

ವಿಷಯ: ರಾಜ್ಯದ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ.

ಉಲ್ಲೇಖ: 1) ರಾಜ್ಯ ಉಚ್ಚ ನ್ಯಾಯಾಲಯ ರಿ.ಪಿ.ಸಂಖ್ಯೆ:41196-208/2014 ದಿ:17.09.2014 ರ ತೀರ್ಪು.

2)ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಸಿ7(2) ಪ್ರಾಶಿಅ.ಲೈ.ಕಿ40/2014-15 ದಿ:23.07.2014.

3)ಬೆಂಗಳೂರು ನಗರ ಪೋಲಿಸ್ ಆಯುಕ್ತರು, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ರವರ ಆದೇಶ ಸಂಖ್ಯೆ: 157ಎಂಐಜಿ(1) ಇತರೆ/2014 ದಿ:26.07.2014

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಶಾಲಾ ಮಕ್ಕಳ ಮೇಲೆ ಇತ್ತೀಚಿನ ದಿನಗಳಲ್ಲಿ ಲೈಂಗಿಕ ಕಿರುಕುಳದಂತಹ ಪ್ರಕರಣಗಳು ಹೆಚ್ಚಾಗಿದ್ದು, ಈ ಕುರಿತು ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ. ಸಾರ್ವಜನಿಕರು, ಮಕ್ಕಳ ಪೋಷಕರು ಈ ಬಗ್ಗೆ ತುಂಬಾ ಆತಂಕ ಪಡುತ್ತಿದ್ದು, ಮಕ್ಕಳ ಸುರಕ್ಷತೆಯನ್ನು ಮಾಡುವುದು ಇಲಾಖೆಯ ಹಾಗೂ ಶಾಲೆಯ ಆದ್ಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ(2)ರಲ್ಲಿ ಈಗಾಗಲೇ ಮಕ್ಕಳ ಸುರಕ್ಷತೆಯ ಕುರಿತು ಸಮಗ್ರವಾದ ಸುತ್ತೋಲೆಯನ್ನು ಹೊರಡಿಸಿ ಅಗತ್ಯ ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ತಿಳಿಸಲಾಗಿತ್ತು.

ಹಾಗೆಯೇ ಉಲ್ಲೇಖ (3) ರಲ್ಲಿ ಬೆಂಗಳೂರು ನಗರ ಪೋಲಿಸ್ ಆಯುಕ್ತರು, ಬೆಂಗಳೂರು ನಗರ ವ್ಯಾಪ್ತಿಯ ಖಾಸಗಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಕುರಿತು ಶಾಲಾ ಆಡಳಿತ ಮಂಡಳಿಗಳು ಅಳವಡಿಸಿಕೊಳ್ಳಬೇಕಾದ ಕ್ರಮದ ಬಗ್ಗೆ ಆದೇಶವನ್ನು ಹೊರಡಿಸಿ ದಿ: 31.08.2014 ರೊಳಗಾಗಿ ಅನುಷ್ಠಾನಗೊಳಿಸಬೇಕೆಂದು ಆದೇಶಿಸಿರುತ್ತಾರೆ.

ಏತನ್ಮಧ್ಯೆ, ಉಲ್ಲೇಖ(3)ರ ಸುತ್ತೋಲೆಯನ್ನು ಪ್ರಶ್ನಿಸಿ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘವು ಘನ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು (ರಿಟ್ ಪಿಟಿಷನ್: 41196-41208/2014) ಪ್ರಕರಣವು ದಿ:17.09.2014 ರಂದು ವಿಚಾರಣೆಗೆ ಬಂದ ಸಂದರ್ಭದಲ್ಲಿ ಘನ ನ್ಯಾಯಾಲಯವು ಮಕ್ಕಳ ಸುರಕ್ಷತಾ ಕ್ರಮವನ್ನು ಖಾಸಗಿ ಅನುದಾನರಹಿತ ಶಾಲೆಗಳ ಜೊತೆಗೆ ಅನುದಾನಿತ ಹಾಗೂ ಸರ್ಕಾರಿ ಶಾಲೆಗಳಲ್ಲಿಯೂ ಸಹ ಅಳವಡಿಸಿಕೊಳ್ಳುವಂತೆ ಆದೇಶಿಸಿದೆ.

ಉಲ್ಲೇಖ(2) ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಮಕ್ಕಳ ಸುರಕ್ಷತೆಯ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದೀಗ ಸರ್ಕಾರಿ ಶಾಲಾ ಮಕ್ಕಳಿಗೆ ಹಾಗೂ ಮಕ್ಕಳ ಪೋಷಕರಿಗೆ ಗುರುತಿನ ಚೀಟಿಯನ್ನು 6 ವಾರಗಳಲ್ಲಿ ವಿತರಿಸಲು ಪ್ರಸ್ತಾಪಿತ ಪ್ರಕರಣದಲ್ಲಿ ಘನ ನ್ಯಾಯಾಲಯವು ಆದೇಶಿಸಿರುವುದರಿಂದ ಈ ಸಂಬಂಧ ಜಿಲ್ಲಾ ಉಪನಿರ್ದೇಶಕರು ಸಂಬಂಧ ಪಟ್ಟ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಹಾಗೂ ಶಾಲಾ ಮುಖ್ಯಸ್ಥರಿಗೆ ತ್ವರಿತವಾಗಿ ಅಗತ್ಯ ನಿರ್ದೇಶನ ನೀಡುವುದು ಮತ್ತು ಅನುಸರಣೆ ಸಂಬಂಧ ನಿಗಾ ವಹಿಸುವುದು.

ಮುಂದುವರಿದು ಖಾಸಗಿ ಅನುದಾನರಹಿತ ಮತ್ತು ಅನುದಾನಸಹಿತ ಶಾಲೆಗಳಲ್ಲಿಯೂ ಸುರಕ್ಷತಾ ಕ್ರಮಗಳನ್ನು ದಿ:31.10.2014 ರೊಳಗಾಗಿ ಅಳವಡಿಸಿಕೊಳ್ಳಲು ಘನ ನ್ಯಾಯಾಲಯವು ಆದೇಶಿಸಿದೆ. ನ್ಯಾಯಾಲಯದ ಆದೇಶವು ಸಮಗ್ರವಾಗಿ ಅನುಷ್ಠಾನವಾಗಬೇಕಾಗಿದೆ. ತಪ್ಪಿದಲ್ಲಿ ನ್ಯಾಯಾಲಯದ ನಿಂದನೆ ಪ್ರಕರಣಗಳು ಎದುರಾಗುವ ಸಾಧ್ಯತೆಯಿದ್ದು, ಇಲಾಖೆಯು ಮುಜುಗರ ಅನುಭವಿಸುವ ಪ್ರಸಂಗ ಎದುರಾಗಬಹುದು. ಪ್ರಯುಕ್ತ ಶಾಲೆಗಳಲ್ಲಿ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳು ಜಾರಿಯಾಗತಕ್ಕದ್ದು. ಮತ್ತು ಆದೇಶ ಪಾಲಿಸದ ಶಾಲೆಗಳ ವಿರುದ್ಧ ಜಿಲ್ಲಾ ಉಪನಿರ್ದೇಶಕರು ಹಾಗೂ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕರ್ನಾಟಕ ಶಿಕ್ಷಣ ಕಾಯಿದೆ ನಿಯಮಾವಳಿಗಳಂತೆ ಅಗತ್ಯ ಕ್ರಮ ವಹಿಸುವುದು.

----2

ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ರಾಜ್ಯದ ಎಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಉಲ್ಲೇಖ(2) ರ ಸುತ್ತೋಲೆಯನ್ನು ಕಳುಹಿಸಲಾಗಿದ್ದು, ಸದರಿ ಸುತ್ತೋಲೆಯನ್ವಯ ಜಿಲ್ಲಾಡಳಿತವು ಅಗತ್ಯ ಕ್ರಮ ವಹಿಸಬೇಕಾಗಿದೆ. ಅಲ್ಲದೇ ಈ ಸಂಬಂಧ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗಿರುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಕೋರಿದೆ.

ರಾಜ್ಯದ ಎಲ್ಲಾ ಶಾಲಾ ಮಕ್ಕಳ ಸುರಕ್ಷತೆಯನ್ನು ಕಾಯುವಲ್ಲಿ ಇಲಾಖೆಯು ಜಿಲ್ಲಾ ಆಡಳಿತದ ಹಾಗೂ ಪೋಲಿಸ್ ಇಲಾಖೆಯ ಸಹಕಾರವನ್ನು ಕೋರುತ್ತದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ;

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
4. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ ವಿಭಾಗ ಇವರಿಗೆ ಕಳುಹಿಸುತ್ತಾ ಅಗತ್ಯ ಕ್ರಮವಹಿಸಲು ಸೂಚಿಸಿದೆ.
5. ಸಹ ನಿರ್ದೇಶಕರು, ಬೆಂಗಳೂರು ಮತ್ತು ಮೈಸೂರು ವಿಭಾಗ ರವರಿಗೆ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಈ ಬಗ್ಗೆ ಪರಿಶೀಲಿಸಲು ತಿಳಿಸಿದೆ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ.
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
8. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ.
10. ಕಛೇರಿ ಪ್ರತಿ.

C:\Users\Admin\Desktop\Lyngika kirukula\Child Safty(guidlines)kannada final.docx

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ: ಸಿ7(2)ಪ್ರಾ.ಶಿ.ಅ.ಶಾ.ಮ.ಲೈ.ಕಿ.40/2014-15** **ದಿನಾಂಕ: 05.10.2014**

**-: ಸುತ್ತೋಲೆ :-**

ವಿಷಯ: ರಾಜ್ಯದ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ

ಉಲ್ಲೇಖ: ಈ ಕಛೇರಿ ಪತ್ರದ ಸಮ ಸಂಖ್ಯೆ :ದಿನಾಂಕ:23.07.2014

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ದೈಹಿಕ ಹಿಂಸೆ ಹಾಗೂ ಅತ್ಯಾಚಾರದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಉಲ್ಲೇಖ(1)ರಂತೆ ಸುರಕ್ಷತಾ ಕ್ರಮಗಳ ಬಗ್ಗೆ ಸುತ್ತೋಲೆಯನ್ನು ಈಗಾಗಲೇ ನೀಡಲಾಗಿದೆ. ಆದಾಗ್ಯೂ ಸದರಿ ಪ್ರಕರಣಗಳು ಮರುಕಳಿಸುತ್ತಿದ್ದು ಸಂಪೂರ್ಣವಾಗಿ ಸದರಿ ಪ್ರಕರಣಗಳನ್ನು ತಡೆಗಟ್ಟುವಿಕೆ ಮತ್ತು ಸುರಕ್ಷತಾ ಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಶಾಲೆಗಳನ್ನು ಪರಿಶೀಲನೆಗೆ ಒಳಪಡಿಸಲು ತೀರ್ಮಾನಿಸಿದ್ದು ಜಿಲ್ಲಾ ಹಂತದ ಉಪನಿರ್ದೇಶಕರು ನೋಡಲ್ ಅಧಿಕಾರಿಗಳಾಗಿ ತಾಲ್ಲೂಕು/ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಬಿ.ಆರ್.ಸಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಹಾಗೂ ಸಿ.ಆರ್.ಪಿ.ಗಳನ್ನೊಳಗೊಂಡ ತ್ರಿಸದಸ್ಯ ಸಮಿತಿಯ ತಂಡಗಳನ್ನು ಅಗತ್ಯಕ್ಕನುಸಾರವಾಗಿ ರಚಿಸಿಕೊಂಡು ಎಲ್ಲಾ ಶಾಲೆಗಳನ್ನು ತಪಾಸಣೆಗೊಳಪಡಿಸಿ ಈ ಪತ್ರಕ್ಕೆ ಅಡಕಗೊಳಿಸಿರುವ ನಮೂನೆಯಲ್ಲಿ ಆನ್ ಲೈನ್ ಮೂಲಕ ದಿನಾಂಕ: 29.11.2014ರೊಳಗೆ ಸಲ್ಲಿಸಲು ತಿಳಿಸಿದೆ. ಹಾರ್ಡ್ ಕಾಪಿಯನ್ನು ಪುಸ್ತಕ ರೂಪದಲ್ಲಿ ಸ್ಪೈರಲ್ ಬೈಂಡಿಂಗ್ ಮಾಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ದೃಢೀಕರಣದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸುವುದು.(ಒಂದು ಪ್ರತಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಒಂದು ಪ್ರತಿ ನಿರ್ದೇಶಕರು, ಪ್ರೌಢ ಶಿಕ್ಷಣ)

ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಖರ ಪರಿಶೀಲನೆ ಹಾಗೂ ನಿಖರ ಮಾಹಿತಿಯ ಕ್ರೋಢೀಕರಣಕ್ಕೆ ಪರಿಶೀಲನಾ ತಂಡಗಳಿಗೆ ಅಗತ್ಯ ತಿಳುವಳಿಕೆ, ಮಾರ್ಗದರ್ಶನ, ಹಾಗೂ ಅಗತ್ಯವಿದ್ದಲ್ಲಿ ತರಬೇತಿಯನ್ನು ನೀಡುವುದು.

ತನಿಖಾ ತಂಡವು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಯ ಮಕ್ಕಳ ಸುರಕ್ಷಾ ಸಮಿತಿ/ಪೋಷಕ ಸಮಿತಿಯ ಪದಾಧಿಕಾರಿಗಳು ಅಥವಾ ಸದಸ್ಯರುಗಳ ಪೈಕಿ ಇಬ್ಬರ ಉಪಸ್ಥಿತಿಯೊಂದಿಗೆ ಪರಿಶೀಲನಾ ಕಾರ್ಯವನ್ನು ನಡೆಸುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ ಮುಖ್ಯ ಶಿಕ್ಷಕರು/ಕಾರ್ಯದರ್ಶಿಯಿಂದ ದೃಢೀಕರಿಸಿದ ನಕಲು ಪ್ರತಿಗಳನ್ನು ಪಡೆದು ನಮೂನೆಯನ್ನು ತುಂಬುವುದು. ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

ಸರ್ಕಾರಕ್ಕೆ ಸದರಿ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಒದಗಿಸಬೇಕಾಗಿರುವುದರಿಂದ ವಿಳಂಬಕ್ಕೆ ಅವಕಾಶವಿಲ್ಲವೆಂದು ತಿಳಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.........................................
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.........................................

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ
2. ಕಛೇರಿ ಪ್ರತಿ.

\\10.96.135.22\e\E\EST2\circular-se.har.docx

**ರಾಜ್ಯದ ಅನುದಾನಿತ / ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ / ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಕುರಿತು ತ್ರಿಸದಸ್ಯ ಸಮಿತಿ ಪರಿಶೀಲಿಸಿ ವರದಿ ನೀಡಬೇಕಾದ ನಮೂನೆ**

| ಕ್ರ.ಸ | ವಿಷಯ | ಪರಿಶೀಲಿಸಿದ ವಿವರಗಳು |
|---|---|---|
| 1 | ಶಾಲೆಯ ಹೆಸರು ವಿಳಾಸ ಮತ್ತು ಡೈಸ್ ಕೋಡ್ (ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ) | |
| 2 | ಶಾಲೆ ಪ್ರಾರಂಭಿಸಲು ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ಆದೇಶ ಸಂಖ್ಯೆ ಮತ್ತು ದಿನಾಂಕ (ವಿವರ ನೀಡುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 3 | ಶಾಲೆಯ ನೋಂದಣಿ (ಶಿಕ್ಷಣ ಕಾಯ್ದೆಯಂತೆ ಮಾಡಲಾಗಿದೆಯೇ ವಿವರ ನೀಡುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 4 | ಆರ್.ಟಿ.ಇ ಅಡಿಯಲ್ಲಿ ಶಾಲೆಯನ್ನು ನೋಂದಾಯಿಸಲಾಗಿದೆಯೇ?(ಪ್ರತಿ ಲಗತ್ತಿಸುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಕಿರಿಯ ಪ್ರಾಥಮಿಕ | |
| 5 | ಶಾಲೆಯು ಪ್ರಥಮ ಮಾನ್ಯತೆ ಪಡೆದಿದೆಯೇ ಪಡೆದಿದ್ದಲ್ಲಿ ಆದೇಶ ಸಂಖ್ಯೆ ಮತ್ತು ದಿನಾಂಕ: ನಂತರ ಮಾನ್ಯತೆ ನವೀಕರಿಸಲಾಗಿದೆಯೇ? (ಹಾಗಿದ್ದಲ್ಲಿ ಎಲ್ಲಿಯವರೆಗೆ ನವೀಕರಿಸಲಾಗಿದೆ)<br>ಅ) ಪೂರ್ವ- ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 6 | ಶಾಲೆಯಲ್ಲಿ ಭೋಧಿಸುತ್ತಿರುವ ಮಾಧ್ಯಮ ಯಾವ ಮಾಧ್ಯಮದಲ್ಲಿ ಭೋಧಿಸಲು ಅನುಮತಿ ಪಡೆಯಲಾಗಿದೆ.<br>ಅ) 1 ರಿಂದ 5ನೇ ತರಗತಿ<br>ಆ) 06 ರಿಂದ 08 ನೇ ತರಗತಿ | |

| | | |
|---|---|---|
| | ಇ) 09 ರಿಂದ 10 ನೇ ತರಗತಿ<br>(ಆದೇಶ ಮತ್ತು ದಿನಾಂಕ, ಪ್ರತಿ ಶಾಲೆಯ ಮಾಧ್ಯಮವಾರು / ಪಠ್ಯಕ್ರಮವಾರು ಪ್ರತ್ಯೇಕ ನಮೂನೆಗಳಲ್ಲಿ ಮಾಹಿತಿ ಒದಗಿಸುವುದು ) | |
| 7 | ಶಾಲೆಯು ಯಾವ ಪಠ್ಯಕ್ರಮ ಮಾದರಿಗೆ ಸಂಬಂಧಿಸಿದ್ದಾಗಿದೆ<br>ಅ) 1 ರಿಂದ 5ನೇ ತರಗತಿ<br>ಆ) 06 ರಿಂದ 08 ನೇ ತರಗತಿ<br>ಇ) 09 ರಿಂದ 10 ನೇ ತರಗತಿ<br>1.ರಾಜ್ಯ ಪಠ್ಯಕ್ರಮ (ರಾಜ್ಯ ಪಠ್ಯಕ್ರಮ ಪುಸ್ತಕಗಳನ್ನು ಖರೀದಿ ಮಾಡಿರುತ್ತಾರೆಯೇ)<br>2.ಐ.ಸಿ.ಎಸ್.ಸಿ (ಸರ್ಕಾರದಿಂದ ನಿರಾಪೇಕ್ಷಣಾ ಪಡೆಯಲಾಗಿದೆಯೇ)<br>3.ಸಿ.ಬಿ.ಎಸ್.ಸಿ (ಸರ್ಕಾರದಿಂದ ನಿರಾಪೇಕ್ಷಣಾ ಪಡೆಯಲಾಗಿದೆಯೇ)<br>(ಪಡೆದಿದ್ದಲ್ಲಿ ವಿವರ ನೀಡುವುದು)<br>4. ಐ.ಸಿ.ಎಸ್.ಸಿ/ಸಿ.ಬಿ.ಎಸ್.ಸಿ ಅನುಮತಿ ಪಡೆದಿದ್ದಲ್ಲಿ ಮಂಡಳಿಗೆ ಸಂಯೋಜನೆ ಪಡೆದಿದೆಯೇ?<br>ಪಡೆಯದಿದ್ದಲ್ಲಿ ಯಾವ ಸಾಲಿನಲ್ಲಿ ಪಡೆಯಬೇಕಾಗಿತ್ತು ಆದೇಶದ ಪ್ರತಿಯನ್ನು ಮುಖ್ಯಶಿಕ್ಷಕರಿಂದ ದೃಢೀಕರಿಸಿ ಪಡೆದುಕೊಳ್ಳುವುದು | |
| 8 | ಶಾಲೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ<br>1.ಸಿಸಿಟಿವಿ ಅಳವಡಿಸಿದೆಯೇ?<br>(ಶಾಲೆಯ ಕಟ್ಟಡದ ಹೊರಗೆ ಮತ್ತು ಕೊಠಡಿಗಳ ಒಳಗಡೆ ಅಗತ್ಯವಿರುವಷ್ಟು ಅಳವಡಿಸಲಾಗಿದೆಯೇ? ಸುಸಜ್ಜಿತವಾಗಿ ಕಾರ್ಯನಿರ್ವಹಿಸುತ್ತಿವೆಯೇ}<br>2.ಅಗ್ನಿನಂದಕ ಅಳವಡಿಸಿದೆಯೇ?<br>3.ಬಹುಮಹಡಿ ಕಟ್ಟಡ ಆಗಿದ್ದಲ್ಲಿ ಸುರಕ್ಷತೆ ಗ್ರಿಲ್ ಅಳವಡಿಸಿದೆಯೆ?<br>4.ಶಾಲೆಯ ಮಕ್ಕಳ ಸುರಕ್ಷಾ ಯೋಜನೆ ಮತ್ತು ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ? | |
| 9 | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ<br>ಶಾಲೆಯ ಕಟ್ಟಡ ಆರ್.ಸಿ.ಸಿ, ಶೀಟು, ಹೆಂಚಿನದೇ ಸ್ವಂತದ್ದೇ/ಬಾಡಿಗೆಯೇ/ಭೋಗ್ಯವೇ(ಮಾಹಿತಿ | |

| | | |
|---|---|---|
| | ನೀಡುವುದು)<br>ಕುಡಿಯುವ ನೀರು ಶೌಚಾಲಯ (ಪ್ರತ್ಯೇಕವಾಗಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿರ್ಮಿಸಲಾಗಿದೆಯೇ/ಇಲ್ಲವೇ<br>ಆಟದ ಮೈದಾನ<br>ಶೈಕ್ಷಣಿಕವಾಗಿ ಮಕ್ಕಳು ಕಲಿಯಲು ಗ್ರಂಥಾಲಯ ಹೊಂದಿದೆಯೇ?<br>ಪೀಠೋಪಕರಣಗಳು/ಪಾಠೋಪಕರಣಗಳನ್ನು ಒದಗಿಸಲಾಗಿದೆಯೇ?<br>ಕಾಂಪೌಂಡ್ ನಿರ್ಮಿಸಲಾಗಿದೆಯೇ? | |
| 10 | ಶಾಲೆಯಲ್ಲಿ ಮಕ್ಕಳ ಹಾಜರಾತಿ ಮತ್ತು ದಾಖಲಾತಿ ಮಾಧ್ಯಮವಾರು/ತರಗತಿವಾರು (ಪ್ರತಿ ತರಗತಿಗೆ ತಲೆ ಎಣಿಕೆ ಮಾಡಿದಾಗ) | |
| 11 | ಶಾಲೆಯಲ್ಲಿ ನೇಮಿಸಿಕೊಂಡಿರುವ ಶಿಕ್ಷಕರುಗಳ ಮಾಹಿತಿ<br>ನಿಗದಿತ ವಿದ್ಯಾರ್ಹತೆ ಹೊಂದಿರುವಬಗ್ಗೆ ಮಾಹಿತಿ<br>ಅ) ಶಿಕ್ಷಕರ ಹೆಸರು ಮತ್ತು ವಿದ್ಯಾರ್ಹತೆ<br>ಆ) ಭೋಧಕೇತರ ಸಿಬ್ಬಂದಿ ಮಾಹಿತಿ (ಪ್ರತ್ಯೇಕವಾಗಿರಲಿ) | |
| 12 | ಪೋಲೀಸ್ ಪರಿವೀಕ್ಷಣೆ ಆಗಿದೆಯೇ/ ಇಲ್ಲವೇ (ಈ ಕಛೇರಿ ಸುತ್ತೋಲೆ ದಿ: 23.07.2014 ರಂತೆ) | |
| 13 | ಶಾಲೆಯಲ್ಲಿ ಪೋಷಕ ಸಮಿತಿ/ಮಕ್ಕಳ ಸುರಕ್ಷಾ ಸಮಿತಿ ರಚಿಸಲಾಗಿದೆಯೇ? | |
| 14 | ಶಾಲಾ ಕಟ್ಟಡದ ಎಲಿವೇಶನ್ ಭಾವಚಿತ್ರದ ಪ್ರತಿಯನ್ನು ತನಿಖಾ ತಂಡದೊಂದಿಗೆ ತೆಗೆಸಿದ ಒಂದೇ ಭಾವಚಿತ್ರದ ಪ್ರತಿ | |
| 15 | ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗೆ ಸುರಕ್ಷತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆಯೇ? | |
| 16 | ಶಾಲಾ ಸಿಬ್ಬಂದಿಗೆ ಸೇವಾ ಭದ್ರತೆ ಒದಗಿಸಲಾಗಿದೆಯೇ? ಪ್ರತಿ ಶಿಕ್ಷಕರ /ಸಿಬ್ಬಂಧಿಯ ಬ್ಯಾಂಕ್ ಹೆಸರು ಮತ್ತು ಖಾತೆ ಸಂಖ್ಯೆನೀಡುವುದು | |
| 17 | ಪ್ರತಿ ವಿದ್ಯಾರ್ಥಿಗೆ ಮಾಧ್ಯಮವಾರು/ತರಗತಿವಾರು ನಿಗದಿಪಡಿಸಿರುವ ಶುಲ್ಕದ ವಿವರ | |

| | | |
|---|---|---|
| 18 | ಸಂದರ್ಶನ ಸಮಿತಿಯ ಅಭಿಪ್ರಾಯ | |
| 19 | ಸಂದರ್ಶನ ಸಮಿತಿ ಶಾಲೆಗೆ ಭೇಟಿ ನೀಡಿದ ದಿನಾಂಕ: | |

**:ಧೃಢೀಕರಣ:**

ಶಾಲೆಗೆ ಭೇಟಿ ನೀಡಿ ನಮೂನೆಯಲ್ಲಿನ ಪ್ರತಿಯೊಂದು ಅಂಶಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯು ಪಡೆಯಲಾಗಿದೆ ಮತ್ತು ಕ್ರಮಬದ್ಧವಾಗಿದೆ ಎಂದು ದೃಢೀಕರಿಸಿದೆ

**ಸಂದರ್ಶನ ಸಮಿತಿಯ ಸದಸ್ಯರ ಸಹಿ**
**ಹೆಸರು, ಹುದ್ದೆ ಮತ್ತು ಮೊಹರು**

**ಶಾಲೆಯ ಮುಖ್ಯಶಿಕ್ಷಕರ ಸಹಿ**
**ಹೆಸರು, ಹುದ್ದೆ ಮತ್ತು ಮೊಹರು**

1.

2

3.

**ಮಕ್ಕಳ ಪೋಷಕ ಸಮಿತಿ/ಹಿತರಕ್ಷಣಾ ಸಮಿತಿ**
**ಸದಸ್ಯರ ಸಹಿ ಮತ್ತು ಹೆಸರು**

1.

2.

**ಕ್ಷೇತ್ರ ಶಿಕ್ಷಣಾಧಿಕಾರಿಗಳು**

. . . . . . . . . . . . . **ತಾಲ್ಲೂಕು/ವಲಯ**

. . . . . . . . . . . . . . . . . . **.ಜಿಲ್ಲೆ**